# ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ-ಆಡಳಿತ ಪ್ರೋತ್ಸಾಹದಾಯಕ ಯೋಜನೆಗಳಿಗೆ ಹಣ 01/2017-18 ದಿನಾಂಕ : 31-10-2017

**<u>ಸುತ್ತೋಲೆ</u>**

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ 2017-18ನೇ ಸಾಲಿನಿಂದ ಪ್ರೋತ್ಸಾಹದಾಯಕ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶೂ ಸಾಕ್ಸ, ಶಾಲಾ ಸಮವಸ್ತ್ರ, ಇತ್ಯಾದಿಗಳಿಗೆ ಕೇಂದ್ರ ಕಛೇರಿಯಿಂದ RTGS ಮೂಲಕ ನೇರವಾಗಿ ಸಂಬಂಧಸಿದ ಶಾಲೆಗಳ ಉಳಿತಾಯ ಖಾತೆಗಳಿಗೆ ಖಜಾನೆ-2 ತಂತ್ರಾಂಶದಿಂದ ಜಮಾ ಮಾಡಲು ತೀರ್ಮಾನಿಸಲಾಗಿದೆ.

2017-18ನೇ ಸಾಲಿನಿಂದ ಪ್ರೋತ್ಸಾಹದಾಯಕ ಯೋಜನೆಗಳಿಗೆ ಹಣವನ್ನು ಖಜಾನೇ-2 ತಂತ್ರಾಂಶದ ಮೂಲಕ ಶಾಲಾ SDMC ಖಾತೆಗಳಿಗೆ ನೇರವಾಗಿ ಜಮಾ ಮಾಡಲು ಕ್ರಮವಹಿಸಲಾಗುವುದು. ಆದ್ದರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಬ್ಲಾಕಿನ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಡ ಶಾಲೆಗಳಿಂದ ಈ ಕೆಳಗೆ ನಮೂದಿಸಿದ ನಮೂನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಿ, ಸಂಬಂದಪಟ್ಟ ಉಪನಿರ್ದೇಶಕರು (ಆಡಳಿತ) ಇವರಿಗೆ ನೀಡುವುದು.

| ಕ್ರ ಸಂ | ಶಾಲೆಯ ಹೆಸರು | ಬ್ಯಾಂಕ್ ಹೆಸರು ಹಾಗೂ ವಿಳಾಸ | ಬ್ಯಾಂಕ್ ಖಾತೆಯ ಸಂಖ್ಯೆ | ಬ್ಯಾಂಕ್ **IFSC CODE** |
|---|---|---|---|---|
| | | | | |

ಈ ಮೇಲೆ ಪ್ರಸ್ತಾಪಿಸಿದ ಮಾಹಿತಿಯೊಂದಿಗೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತಿಶಾಲೆಯಿಂದ **"Cancel"** ಎಂದು ನಮೂದಿಸಿದ ರದ್ದು ಪಡಿಸಿದ, ಒಂದು ಖಾಲಿ ಚೆಕ್ ಅನ್ನು ಹಾಗೂ ಶಾಲೆಯ ಮುಖ್ಯಸ್ಥರ ಸಹಿ ಪಡೆದ **"e-Mandate Form"** ಜೊತೆಗೆ ಉಪನಿರ್ದೇಶಕರು (ಆಡಳಿತ) ಇವರಿಗೆ ನೀಡುವುದು. ಉಪನಿರ್ದೇಶಕರು (ಆಡಳಿತ) ಇವರು **e-Mandate Form & Cancel** ಆಗಿರುವ ಚೆಕ್ ಅನ್ನು ಶಾಶ್ವತವಾಗಿ ಸಂರಕ್ಷಿತಕ್ಕದ್ದು.

ತದನಂತರ ಉಪನಿರ್ದೇಶಕರು (ಆಡಳಿತ) ಇವರು ಖಜಾನೆ -2 ತಂತ್ರಾಂಶದಲ್ಲಿ ಪ್ರತಿ ಶಾಲೆಯ ಮಾಹಿತಿಗಳನ್ನು ಅಳವಡಿಸಲು ಈ ಮೂಲಕ ಸೂಚಿಸಿದೆ.

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ